




ಬುದ್ಧನ ಜನ್ಮಸ್ಥಾನವಾದ ನೇಪಾಳವು ಹಿಂದೂ ಮತ್ತು ಬೌದ್ಧರಿಬ್ಬರಿಗೂ ಪವಿತ್ರ ಸ್ಥಳವಾಗಿದೆ. ಅಲ್ಲಿಯ ಪ್ರಸಿದ್ಧ ಯಾತ್ರಾ ಸ್ಥಳಗಳ ಕಿರುಪರಿಚಯವನ್ನು ನೀಡಿರುವ ಕುಮಾರಿ ಆಶಾ ಆಶ್ರಮದ ಭಕ್ತರಾಗಿರುವರು.

"ಹಿಮಾಲಯ" ಎಂಬ ಹೆಸರು ಕಿವಿಗೆ ಬಿದ್ದೊಡನೆಯೆ ಮೈ ಮನಗಳು ಪುಳುಕಿತಗೊಳ್ಳುವಾಗ "ಭೂಮಿಯಲ್ಲಿನ ಸ್ವರ್ಗ"ದಂತೆ ಇರುವ ಹಿಮಾಚ್ಛಾದಿತ ನೇಪಾಳವನ್ನು ನೋಡುವ ಸುವರ್ಣಾವಕಾಶ ದೊರೆತಾಗ ಆನಂದದಿಂದ ಕುಣಿಯತೊಡಗಿತು ಮನಸ್ಸು. ರೋಮಾಂಚನವಾಯಿತು! ಕಡೆಗೂ ಕಾತರದಿಂದ ಕಾಯುತ್ತಿದ್ದ ಆ ದಿನ ಬಂದೇ ತೀರಿತು.

ಅನೇಕ ರಾಜ್ಯಗಳನ್ನು ಹಾಯುತ್ತಾ ಬಿಹಾರ್ ರಾಜ್ಯವನ್ನು ತಲುಪಿದೆವು. ಬಿಹಾರ್ ರಾಜ್ಯದ ಸೀಮಾಪ್ರದೇಶವಾದ ಬೀರ್‌ಗಂಜ್‌ನಿಂದ ೩೫೦ ಕಿ.ಮಿ. ದೂರದಲ್ಲಿರುವ ನೇಪಾಳದ ರಾಜಧಾನಿಯಾದ ಕಾಠ್‌ಮಂಡುವಿಗೆ ಒಂಭತ್ತು ಗಂಟೆಗಳ ಪ್ರಯಾಣ. ಬಸ್ಸನ್ನೇರಿ ಕುಳಿತ ನಮಗೆ ಇಕ್ಕೆಲಗಳಲ್ಲೂ ಪ್ರಕೃತಿ ಸೌಂದರ್ಯವನ್ನು ಸವಿಯುವಾಗ "ಅಯ್ಯೊ! ಮೈಯೆಲ್ಲಾ ಕಣ್ಣಾಗಬಾರದಿತ್ತೇ!" ಎನಿಸಿತು. ಹಸಿರು ರೇಷ್ಮೆ ವಸ್ತ್ರವನ್ನು ಧರಿಸಿರುವ ಬೆಟ್ಟಗಳ ಸಾಲೇ ಸಾಲು. "ನಾನೇನು ಕಡಿಮೆಯೇ?" ಎಂದು ಮುಗಿಲನ್ನು ಮುಟ್ಟುವ ಮರಗಳು. "ನನಗಿಂತ ಬಿಳುಪು ಯಾರಿದ್ದಾರೆ?" ಎಂದು ಪ್ರಶ್ನಿಸುವ ಶ್ವೇತ ಶುಭ್ರ ಆಗಸ. ಬಿಳಿಯ ಮೋಡಗಳು ಒಂದಕ್ಕೊಂದು ಡಿಕ್ಕಿ ಹೊಡೆದು ಎಲ್ಲೆಡೆಯಲ್ಲೂ ಚದುರಿವೆಯೇನೋ ಅನ್ನಿಸುತ್ತದೆ. ದಾರಿಯಲ್ಲಿ "ಮನಕಾಮನ ದೇವಿ"ಯ ಮಂದಿರವನ್ನು ಹಾದು ಹೋಗಬೇಕು. ಬೆಟ್ಟದ ತುದಿಯಲ್ಲಿರುವ ಪುಟ್ಟ ಸುಂದರ ಮಂದಿರವದು. "ಮನಕಾಮನ" ಎಂದರೆ ಮನಸ್ಸಿನ ಆಸೆಗಳೆಲ್ಲವನ್ನೂ ಪೂರೈಸುವವಳು. ಸೂರ್ಯಾಸ್ತವಾಗುತ್ತಿರುವಂತೆ ಮೈ ನಡುಗಿಸುವಂಥ ಚಳಿ. ರಾತ್ರಿ ಸುಮಾರು ಹತ್ತು ಗಂಟೆಗೆ ನಮ್ಮನ್ನು ಕರೆದೊಯ್ಯುತ್ತಿದ್ದ ವಾಹನವನ್ನು "ಕೀಚ್" ಎಂದು ಶಬ್ದ ಮಾಡುತ್ತಾ ನಿಲ್ಲಿಸಿದಾಗಲೇ ನಾವು ಪ್ರಕೃತಿಯ ಸೊಬಗಿನ ಮಡಲಿನಿಂದ ವಾಸ್ತವಕ್ಕೆ ಬಂದೆವು. ಶ್ರೀಮಾನ್ ಬದರಿದಾಸರ ಮನೆಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯಾದ ಕಾರಣ ಆ ಅಪರಿಚಿತರ ಮನೆಯನ್ನು ಹುಡುಕುತ್ತಾ ಟ್ಯಾಕ್ಸಿ ಮಾಡಿ ಹೊರಟೆವು. ಸ್ಥಳ ಪತ್ತೆಹಚ್ಚುತ್ತಲೇ ದಣಿದ ಕಾರಣ ನಿದ್ರಾದೇವಿಯು ಎಲ್ಲರನ್ನೂ ಆವರಿಸಿದಳು. ಯಾ ದೇವಿ ಸರ್ವಭೂತೇಷು ನಿದ್ರಾ ರೂಪೇಣ ಸಂಸ್ಥಿತಾ (ಆ ದೇವಿ ಎಲ್ಲ ಪ್ರಾಣಿಗಲಲ್ಲಿ ನಿದ್ರಾ ರೂಪದಲ್ಲಿ ಇರುವವಳು) ಅಲ್ಲವೇ?

ಗಂಟೆಗಳ ನಿನಾದದಿಂದ ಎಚ್ಚರವಾಗಲು ಬೆಳಕು ಹರಿದಿತ್ತು. ಶಬ್ದವನ್ನರಸುತ್ತಾ ಹೊರಗೆ ಹೋಗಿ ನೋಡಲು ಮನೆಯ ಮುಂದೆಯೆ ಪುಟ್ಟ ಪುಟ್ಟ ದೇವಾಲಯಗಳು. ಸುತ್ತಲೂ ಕಣ್ಣು ಹಾಯಿಸಿದೆವು. ಎಲ್ಲಾ ಮೂರು ನಾಲ್ಕು ಅಂತಸ್ತಿನ ಮನೆಗಳು. ಅಲ್ಲಿ ಮನೆಗಳನ್ನು "ಚೌಕಿ" (ಸಾಮರಸ್ಯ) ಎಂದು ಕರೆಯುತ್ತಾರೆ. ಅದೆಂತಹ ಸಾಮರಸ್ಯ! ಒಂದು ಮನೆಯಿಂದ ಇನ್ನೊಂದು ಮನೆಗೆ ನೆಗೆದೇ ಬಿಡಬಹುದು. ಇವುಗಳನ್ನು ಕಟ್ಟುವ ಮಾದರಿಗೆ "ನೆವಾರಿ" ಎನ್ನುತ್ತಾರೆ. ಅವಕ್ಕೆ ಚಿಕ್ಕ ಚಿಕ್ಕ ಎರಡೆರಡು ಬಾಗಿಲುಗಳು— ಒಂದು ಗಾಜಿನ ಬಾಗಿಲು ಮತ್ತೊಂದು ಮರದ ಬಾಗಿಲು. ಆ ಅಗುಳಿಗಳ ವಿನ್ಯಾಸದ ಸೊಬಗೇ ಕಣ್ಣಿಗಾನಂದ. ಒಂದು ಬಗೆಯ ಹುಲ್ಲಿನಿಂದ ಮಾಡಿದ "ಸುಕೂನ್" ಎಂದು ಕರೆಯುವ ಕುರ್ಚಿಗಳು ಜನರ ಕಲಾನೈಪುಣ್ಯತೆಗೆ ಮಾದರಿಯಾಗಿದ್ದವು. ಮಹಡಿಯ ಪ್ರಾಂಗಣದಿಂದ ಅದೇ ಮನೋಹರ ಪ್ರಾಕೃತಿಕ ದೃಶ್ಯಗಳು. ಓಹ್! ಸೃಷ್ಟಿಕರ್ತನನ್ನು "ಸಮದರ್ಶಿ", "ನಿಷ್ಪಕ್ಷಪಾತಿ" ಎಂದೆಲ್ಲಾ ಕರೆಯುತ್ತಾರೆ. ಆದರೆ ಇಲ್ಲಿಯಾದರೋ ತನ್ನ ಸೌಂದರ್ಯವನ್ನೆಲ್ಲಾ ಒಂದೆಡೆಯೇ ಧಾರೆಯೆರದಂತೆ ಇದೆಯಲ್ಲಾ?

ಮೊದಲನೆಯ ದಿನ ನೇಪಾಳದ ಕುಲದೈವವಾದ ಸುಪ್ರಸಿದ್ಧ ಪಶುಪತಿನಾಥನ ಮಂದಿರಕ್ಕೆ ಹೋದೆವು. ಈ ಜ್ಯೋತಿರ್ಲಿಂಗವು ೫ ಕಿ.ಮೀ. ದೂರದಲ್ಲಿ ಗೌಸಾಲ್ ಎಂಬ ಪ್ರದೇಶದಲ್ಲಿ ಭಾಗಮತಿಯ ದಡದಲ್ಲಿದೆ. "ಪಶು" ಎಂದರೆ ಸಂಸ್ಕೃತದಲ್ಲಿ "ಪ್ರಾಣಿ" ಅಥವಾ "ಇಂದ್ರಿಯಗಳು" ಎಂದು. ಪಶುಪತಿ ಎಂದರೆ ಪಶು ಸ್ವಭಾವದ ಇಂದ್ರಿಯಗಳ ಒಡೆಯ ಎಂದು. ಭಕ್ತರಿಂದ ಆನಂದವಾಗಿ ಕ್ಷೀರಾಭಿಷೇಕ ಮಾಡಿಸಿಕೊಳ್ಳುತ್ತಾ ಕುಳಿತಿದ್ದ ಆ ಪಶುಪತಿನಾಥನ ದರ್ಶನದಿಂದ ಮನವು ಭಾವಭಕ್ತಿಗಳಿಂದ ತುಂಬಿಹೋಯಿತು. ಪಶುಪತಿನಾಥನ ನಾಲ್ಕು ತಲೆಗಳಿಗನುಗುಣವಾಗಿ ನಾಲ್ಕು ಬಾಗಿಲುಗಳು ದರ್ಶನಕ್ಕೆ. ದೇವಾಲಯದ ಬಾಗಿಲುಗಳ ಮೇಲಿನ ಕಲಾವಿನ್ಯಾಸವನ್ನು ನೋಡಿ ಮೂಕರಾದೆವು. ಅದೆಂತಹ ಸೊಬಗು! ಆಶ್ಚರ್ಯವೆಂದರೆ ಪ್ರಾಣಿಗಳ ಚರ್ಮದಿಂದ ಮಾಡಿದ ಯಾವುದೇ ವಸ್ತುವನ್ನು ಮಂದಿರದೊಳಗೆ ಒಯ್ಯುವಂತಿಲ್ಲ. ಪಶುಪತಿನಾಥನಿಗೆ ಇಷ್ಟವಾಗುವುದಿಲ್ಲವೆಂಬ ನಂಬಿಕೆ ಆ ಜನರಿಗೆ. ಕೇವಲ ಹಿಂದೂಗಳನ್ನು ಮಾತ್ರವೇ ದೇವಾಲಯದ ಒಳಗೆ ಬಿಡುವ ಆ ಪೂಜಾರಿಗಳು ದಕ್ಷಿಣದೇಶದವರು ಎಂದರೆ ವಿಸ್ಮಯವಾಗುವುದಲ್ಲವೇ? ದೇವಸ್ಥಾನದ ಮೇಲ್ಭಾಗವು ಎರಡು ಪಗೋಡ(ಗೋಪುರ)ಗಳಿಂದ ಕೂಡಿದೆ ಹಾಗೂ ಮುಂಭಾಗದ ಶಿವನ ವಾಹನ ನಂದಿಯನ್ನು ದಾಟಿಯೇ



ಪಶುಪತಿ ನಾಥ ಮಂದಿರ.

ಒಳಹೋಗಬೇಕು. ಪ್ರಾಕಾರದಲ್ಲಿ ವೇದಪಠನ ಮಾಡುತ್ತಾ ಕುಳಿತಿದ್ದ ಪೂಜಾರಿಗಳು ದೇವಾಲಯದ ಪವಿತ್ರತೆಯನ್ನು ಮತ್ತಷ್ಟು ಹೆಚ್ಚಿಸುತ್ತಿರುವಂತೆ ಇದ್ದರು. ದರ್ಶನದ ಆನಂದದಿಂದ ಹೊರಗೆ ಬಂದ ನಮಗೆ ಭಾಗಮತಿಯ ಕಲರವವು ಪುಳಕಿತಗೊಳಿಸಿತು. ದಡದ ಇನ್ನೊಂದು ಕಡೆ ಸಣ್ಣ ಸಣ್ಣ ಅನೇಕ ಶಿವ ಲಿಂಗಗಳು. ಮನಸ್ಸು ಹೋದಡೆಯೆಲ್ಲಾ ಕಣ್ಣು ಹಿಂಬಾಲಿಸಿತು. ಒಂದು ಕ್ಷಣ ದಿಗ್ಭ್ರಮೆಯಾಯಿತು! ಇದೇನಿದು? ಜೀವಂತ ಶಿವ! ಓಹ್! ದರ್ಶನವೋ? ಪಕ್ಕದಲ್ಲೇ ಮಾರ್ಗದರ್ಶಿಯ ಕಂಚಿನ ಕಂಠ, "ಇಲ್ಲಿನ ಜನರು ಶಿವನ ವೇಷ ಧರಿಸಿ ಓಡಾಡುತ್ತಾರೆ" ಎಂದು!!

ಭಾಗಮತಿಯ ಮತ್ತೊಂದು ದಡದಲ್ಲಿ ಶಕ್ತಿಪೀಠ—"ಗುಹೇಶ್ವರಿ" ದೇವಿಯ ದೇವಸ್ಥಾನ. ಪೌರಾಣಿಕ ಕತೆಯೇನೆಂದರೆ ಅಗ್ನಿಗೆ ಆಹುತಿ ಮಾಡಿಕೊಂಡಿದ್ದ ಸತಿಯ ದೇಹವನ್ನು ತೆಗೆದುಕೊಂಡು ಆವೇಶದಿಂದ ಶಿವನು ನೃತ್ಯವಾಡುತ್ತಿರುವಾಗ ದೇವಿಯ ದೇಹವು ೧೦೮ ಭಾಗಗಳಾಗಿ ಭೂಮಿಯಲ್ಲಿ ಬಿದ್ದವು. ಆಕೆಯ ದೇಹಾಂಗವಾದ "ನಾಭಿ"ಯು ಈ ಸ್ಥಳದಲ್ಲಿ ಬಿದ್ದು ಗುಹೇಶ್ವರಿಯ ಸುಂದರ ಮಂದಿರ ನಿರ್ಮಾಣವಾಯಿತು. ಪ್ರತಿಯೊಂದು ದೇವಾಲಯದ ಹಿಂದೆಯೂ ಒಂದು ಆಧ್ಯಾತ್ಮಿಕ ಹಿನ್ನೆಲೆಯಿರುವುದನ್ನು ಕೇಳಿ ಭಾರತೀಯರ ನರನಾಡಿಗಳಲ್ಲೇ ಆಧ್ಯಾತ್ಮಿಕತೆಯು ಪ್ರವಹಿಸುತ್ತಿರುವುದೇನೋ ಎಂದುಕೊಳ್ಳುತ್ತಾ ಹೊರಬರಲು ಕಣ್ಣು ಹಾಯಿಸುವಷ್ಟು ದೂರದಲ್ಲೇ "ಬೌದ್ಧನಾಥ"ನ ಮಂದಿರ.

ಇದು ವಿಶಾಲವಾದ ವೃತ್ತಾಕಾರದ ಅಂಗಣ. ಈ ವೃತ್ತಾಕಾರದ ಗೋಡೆಗಳ ಮೇಲೆ ಸುಂದರವಾದ ಬುದ್ಧನ ಜೀವನವನ್ನು ಪ್ರತಿನಿಧಿಸುತ್ತಿರುವ ತೈಲ ಚಿತ್ರಗಳು. ಇದು ಬುದ್ಧನ ಅನುಯಾಯಿ "ಲೋಕೇಶ್ವರ" ಎಂಬುವವರ ಕಾಲದಲ್ಲಿ ನಿರ್ಮಾಣವಾಯಿತಂತೆ. ಅಲ್ಲಲ್ಲಿ ಮಕ್ಕಳ ಆಟಿಕೆಗಳಂತೆ ಇದ್ದ ಚಕ್ರಗಳು ನನ್ನ ಗಮನವನ್ನು ಸೆಳೆದವು. ಕುತೂಹಲದಿಂದ ಅಲ್ಲಿಯೇ ಇದ್ದ ಲಾಮರವರನ್ನು ಕೇಳಲು ಅವು ಧರ್ಮಚಕ್ರಗಳೆಂದು ತಿಳಿದು ಬಂತು. ಧರ್ಮಚಕ್ರದಲ್ಲಿ ಬರೆದಿದ್ದ ಅಕ್ಷರಗಳನ್ನು ಓದಿ ಅದರ ಅರ್ಥವನ್ನು ಹೀಗೆಂದು ತಿಳಿಸಿದರು : ॐ, म, णि, प द, मे, हूँ — ॐ ಓಂಕಾರ, म ದೇವಲೋಕ, णि ಅಸುರಲೋಕ, प ಮಾನವಲೋಕ, द ಪಶುಲೋಕ, मे ಪಿತೃಲೋಕ, हूँ ನರಕಲೋಕ. ಈ ಪವಿತ್ರ ಮಂತ್ರವನ್ನು ಉಚ್ಚರಿಸುತ್ತಾ ಧರ್ಮಚಕ್ರವನ್ನು ತಿರುಗಿಸಿದರೆ ಕೆಟ್ಟ ಸಂಸ್ಕಾರಗಳೆಲ್ಲಾ ನಾಶವಾಗಿ ಮನಸ್ಸು ಪವಿತ್ರವಾಗುವುದೆಂಬ ನಂಬಿಕೆ. ಸಪ್ತಲೋಕಗಳನ್ನೂ ಪ್ರತಿನಿಧಿಸುವ ಈ ಮಂತ್ರದ ಹಿಂದಿದ್ದ ತಾತ್ವಿಕ ದೃಷ್ಟಿಯನ್ನು ಕಂಡು ಆಲೋಚನಾಪರಳಾದೆ. ಆ ಅಂಗಣದ ಮುಂಭಾಗದಲ್ಲಿಯೇ ಬೌದ್ಧನಾಥನಿಗಾಗಿ ಒಂದು ಪುಟ್ಟ ಮಂದಿರ. ಎರಡು ಬಾಗಿಲುಗಳುಳ್ಳ ಈ ಮಂದಿರದಿಂದ ಅಂಗಣದ ಮಧ್ಯದಲ್ಲಿರುವ ಅರ್ಧ ಗೋಲಾಕೃತಿಯ ಸ್ತೂಪಕ್ಕೆ ಹೋಗಲು ದಾರಿ. ಈ ಸ್ತೂಪದ ಮೇಲಿರುವ ಚೌಕಾಕಾರದ ಕಟ್ಟಡದ ನಾಲ್ಕೂ ಕಡೆ ಎರಡು ಕಣ್ಣು ಹಾಗೂ ಒಂದು ಮೂಗಿನ ಚಿತ್ರ. ಅವು ಬುದ್ಧನ ಕಣ್ಣುಗಳು ಎಂಬ ಪ್ರತೀತಿ. ಅದರ ಮೇಲೊಂದು ಗೋಪುರ. ಚಳಿಯನ್ನು ತಡೆಯಲಾರದ ಒಬ್ಬ ಬಾಲಕನು ಉದ್ದನೆಯ ಟೋಪ್ಪಿಯನ್ನು ಹಾಕಿಕೊಂಡು ಕುಳಿತಂತೆ ಕಾಣುತ್ತಿತ್ತು ಹೊರನೋಟದಿಂದ. ಬುದ್ಧ ಜಯಂತಿಯ ದಿನದಂದು ಕಣ್ಣುಕೋರೈಸುವ ದೀಪಾಲಂಕಾರ ಮಂದಿರಕ್ಕೆ.

ಸಂಜೆಯಾಯಿತು. ದಾರಿಯಲ್ಲಿ ಬಣ್ಣಬಣ್ಣದ ಉಡುಪನ್ನು ಧರಿಸಿರುವ ಸುಂದರ ಹೆಣ್ಣುಮಕ್ಕಳು, ಶಾಲೆಯಿಂದ ಬರುತ್ತಿದ್ದ ಮಕ್ಕಳು, ವಿವಿಧ ಸಿಹಿತಿಂಡಿಗಳ ಅಂಗಡಿಗಳು, ಎಲ್ಲವನ್ನೂ ಕುತೂಹಲ ದೃಷ್ಟಿಯಿಂದ ವೀಕ್ಷಿಸುತ್ತಾ ಮನಸ್ಸನ್ನು ಅಲ್ಲೇ ಬಿಟ್ಟು ಶರೀರವನ್ನು ಮಾತ್ರವೇ ಹೊತ್ತು ಹಿಂದಿರುಗಿದೆವು. ಆತಿಥೇಯರ ಮನೆಗೆ ಕಾಲಿಡುತ್ತಲೇ ಕಿವಿಗೆ ಅಮೃತವರ್ಷ! ಓಹ್! ಅದೇ ಸ್ತೋತ್ರ, ಅದೇ ಹಾಡು, ಸ್ವಾಮಿ ವಿವೇಕಾನಂದರು ರಚಿಸಿದ ಶ್ರೀರಾಮಕೃಷ್ಣರ ಸುಪ್ರಸಿದ್ಧ ಆರಾತ್ರಿಕ "ಖಂಡನ ಭವ ಬಂಧನ...." ಆರತಿ ನಡೆಯುತ್ತಿದೆ. ದೇಶದ ಈ ಮೂಲೆಯಲ್ಲಿಯೂ ಆ ದಕ್ಷಿಣೇಶ್ವರದ ದೇವಮಾನವನ ಭಕ್ತರು! ರೋಮಾಂಚನ, ಆನಂದ ಎಲ್ಲಾ ಒಟ್ಟೊಟ್ಟಿಗೆ. ನಾವೂ ಸಂತೃಪ್ತರಾಗಿ ಭಾಗವಹಿಸಿದೆವು. ಆರತಿಯ ನಂತರ ರಾತ್ರಿ ಸುತ್ತಮುತ್ತಲೂ ಇದ್ದ ಮಾತಾ ಹರಿತ, ಮಾತಾ ಮಂಗಳಾ, ಶ್ರೀಕೃಷ್ಣ, ಭೀಮಸೇನ, ಬುದ್ಧ ಮುಂತಾದ ಮಂದಿರಗಳನ್ನೂ ನೋಡಿದೆವು. ಬೌದ್ಧ ಮಂದಿರದ ವಿಶೇಷವೆಂದರೆ ಪ್ರತಿಯೊಂದು ಇಟ್ಟಿಗೆಯ ಮೇಲೂ ಬುದ್ಧನ ವಿಗ್ರಹ!

ಮರುದಿವಸ ನೇಪಾಳದ "ಜೀವಂತ ದೇವತೆ"ಯಾದ ಕುಮಾರಿಯನ್ನು ನೋಡಲು "ದರ್ಬಾರ ಚೌಕ"ಕ್ಕೆ ಹೋದೆವು. ಸಾಂಪ್ರದಾಯಿಕ ಶಾಕ್ಯ ವಂಶಕ್ಕೆ ಸೇರಿದ ೭-೮ ವರ್ಷದ ಸುಂದರ, ಧೀರ ಹೆಣ್ಣು ಮಗಳನ್ನು ದೇವತೆಯಂತೆ ಪೂಜಿಸುವುದು ಈ ದೇಶದ ವೈಶಿಷ್ಟ್ಯ. ಆಯ್ಕೆಯ ಮುನ್ನ ಕೆಲವು ಪರೀಕ್ಷೆಗಳನ್ನು ಗೆದ್ದ ಆ ಬಾಲಕಿಯನ್ನು ಋತುಮತಿಯಾಗುವವರೆಗೂ ಪೂಜಿಸುತ್ತಾರೆ. ಆ ನಂತರ ಆಕೆ ಎಲ್ಲರಂತೆ ಸಾಮಾನ್ಯ ಜೀವನ ನಡೆಸುವಳು! ಅಂತಹ ಸುಂದರ ಕೆತ್ತನೆಯ ಕೌಶಲ್ಯಗಳಿಂದ ತುಂಬಿದ ಅರಮನೆಯಲ್ಲಿ ವಾಸಿಸುತ್ತ, ನಾಡಿನ ಜನರೆಲ್ಲರಿಂದಲೂ ದೇವತೆಯಂತೆ ಪೂಜಿಸಲ್ಪಟ್ಟ ಆ ಬಾಲಕಿಯು ಹೇಗೆ ಸಾಮಾನ್ಯ ಜೀವನ ನಡೆಸಲು ಸಾಧ್ಯವಾಗುವುದೋ

ಎಂದು ಯೋಚನಾತತ್ಪರಳಾದೆ. ಕಿಟಕಿಯಿಂದಲೆ ಎಲ್ಲರಿಗೂ ದರ್ಶನ. ಮಾತಿಲ್ಲ. ಕೇವಲ ಮುಗುಳ್ನಗೆ! ಇಂದ್ರ ಜಾತ್ರೆಯ ದಿವಸ ಆ ಬಾಲಕಿಯನ್ನು ಬಹು ಸುಂದರವಾಗಿ ಅಲಂಕರಿಸುವರು. ವಿವಿಧ ಬಗೆಯ ಆಭರಣಗಳು, ಹೂವಿನ ಮಾಲೆಗಳು, ಹಣೆಯ ಮೇಲೆ ಮೂರನೆಯ ಕಣ್ಣಿನಂತೆ ಇರುವ ಬಿಂದಿ, ಸರ್ಪದ ಆಕೃತಿಯ ಚಿನ್ನದ ಹಾರ, ರೇಷ್ಮೆವಸ್ತ್ರ– ಇವುಗಳನ್ನು ಧರಿಸಿ ಚಿನ್ಮಯ ಪ್ರತಿಮೆಯಂತೆ ಕಂಗೊಳಿಸುವಳು! "ಕುಮಾರಿ"ಯ ದರ್ಶನದಿಂದ ಪಾವನವಾದೆವೆಂದು ಕೃತಜ್ಞತಾಭಾವದಿಂದ ಸುಪ್ರಸಿದ್ಧ ಸ್ವಯಂಭೂನಾಥ ಸ್ತೂಪ ನೋಡಲು ಮುಂದೆ ಹೋದೆವು.


ಕುಮಾರಿ

ಬಹಳ ಹಿಂದೆ ಬೌದ್ಧಭಿಕ್ಷುವೊಬ್ಬನು ಒಂದು ಅಲೌಕಿಕ ತಾವರೆಯನ್ನು ತಂದು ಒಂದು ಕೊಳದಲ್ಲಿ ನೆಟ್ಟಿದ್ದನಂತೆ. ಆ ಕೊಳ ಆಗ ಇಡೀ ಕಾಠ್‌ಮಂಡು ಕಣಿವೆಯನ್ನು ಆವರಿಸಿತ್ತಂತೆ. ಕೆಲವು ದಿನಗಳಲ್ಲೇ ಆ ತಾವರೆ ದಿವ್ಯ ಕಾಂತಿಯನ್ನು ಹೊರಸೂಸತೊಡಗಿತು! ಆದ್ದರಿಂದಲೇ "ಸ್ವಯಂಭೂ" ಸ್ವತಃ ಉದ್ಭವಿಸಿದ್ದು ಎಂಬ ಹೆಸರು ಬಂದಿತು. ಈ ಸುವಾರ್ತೆಯನ್ನು ಕೇಳಿ ಅನೇಕ ಋಷಿಮುನಿಗಳು, ದೇವತೆಗಳು ಅದನ್ನು ನೋಡಲು ಬಂದರು. ಸಮೀಪಕ್ಕೆ ಬಂದವರಿಗೆಲ್ಲಾ ಅದರ ಕಾಂತಿಯಿಂದ ಜ್ಞಾನೋದಯವಾಯಿತಂತೆ!! ಚೀನಾ ದೇಶದ ಪವಿತ್ರ ಪರ್ವತದ ಮೇಲೆ ಧ್ಯಾನಾಸಕ್ತನಾಗಿದ್ದ ಮಂಜುಶ್ರೀ ಎಂಬ ಬೋಧಿಸತ್ತ್ವನಿಗೆ ಈ ದಿವ್ಯತಾವರೆಯ ಸ್ವಪ್ನದರ್ಶನವಾಗಿ ಅದನ್ನು ಪೂಜಿಸಲು ಬಂದನು. ಎಲ್ಲರಿಗೂ ಸುಗಮ್ಯವಾಗಲೆಂದು ತನ್ನ ಕತ್ತಿಯಿಂದ ಬೆಟ್ಟವನ್ನು ಕಡಿದು ಕೊಳದ ನೀರನ್ನೆಲ್ಲಾ ಹರಿಯಬಿಟ್ಟನು. ಆದ್ದರಿಂದಲೇ "ಕಾಠ್ ಮಂಡು" ಎಂಬ ಹೆಸರು ಬಂದಿತು. ಆ ತಾವರೆಯೇ ಸ್ತೂಪವಾಯಿತು. ಕಥೆಯನ್ನು ಕೇಳಿ ಸ್ತೂಪವನ್ನು ಸ್ಪರ್ಶಿಸಿದರೆ ನಮ್ಮಲ್ಲಿದ್ದ ಅಜ್ಞಾನ ಕಿಂಚಿತ್ ಆದರೂ ತೊಲಗಬಹುದೆನೋ ಎಂಬ ಆಸೆಯಿಂದ ಹತ್ತಿರ ಹೋದೆವು.

ಇಲ್ಲಿಂದ ೧೨ ಕಿ.ಮಿ. ದೂರದಲ್ಲಿರುವ ಭಕ್ತಪುರಕ್ಕೆ ಹೋದೆವು. ಶಂಖಾಕಾರದ ಈ ಪುರವು ಅತ್ಯಂತ ಸುಂದರ ಪ್ರಾಕೃತಿಕ ದೃಶ್ಯಗಳಿಂದ ಕಂಗೊಳಿಸುತ್ತಿದೆ. ನೇಪಾಳ ರಾಜ್ಯದಲ್ಲಿ ಅತಿ ಮುಖ್ಯವಾದ ಪ್ರಾಚೀನ ನಗರವಿದು. ಈ ಪುಟ್ಟ ನಗರವು ಕೇವಲ ೬.೮೮ ಚದರ ಕಿ.ಮಿ ಸ್ಥಳವನ್ನು ಆವರಿಸುತ್ತದೆಯಾದರೂ ಅನೇಕ ಕಣ್ಮನ ಸೆಳೆಯುವ ಸ್ಥಳಗಳಿಂದ ಕೂಡಿದೆ. ನಗರದ ಅಷ್ಟದಿಕ್ಕುಗಳಲ್ಲೂ ದಿಕ್ಪಾಲಕರಂತೆ ಅಷ್ಟಮಾತೃಕೆಯರ ಭವ್ಯ ಸುಂದರ ಪ್ರತಿಮೆಗಳು—ದೇವಿಯು ಭಕ್ತಾಪುರಕ್ಕೆ ಯಾವ ಅನಿಷ್ಟವೂ ನುಸುಳದಂತೆ ಕಾಯುತ್ತಿರುವಳೋ ಎಂಬಂತೆ!

ತುಮಾದಿ ಚೌಕ, ದರ್ಬಾರ್ ಚೌಕ, ದತ್ತಾತ್ರೇಯ ಚೌಕ— ಇವು ಮೂರು ಮುಖ್ಯವಾದ ಚೌಕಗಳು. ಅತ್ಯಂತ ಪ್ರಾಚೀನ ಕಟ್ಟಡಗಳಿಂದ ಕೂಡಿದ ತುಮಾದಿ ಚೌಕದಲ್ಲಿ ನ್ಯಾಟಾಬ್ಲ ಮಂದಿರವಿದೆ. ಐದು ಪಗೋಡಗಳುಳ್ಳ ಈ ಮಂದಿರಕ್ಕೆ ೩೦ ಮೆಟ್ಟಿಲುಗಳಿವೆ. ಇಲ್ಲಿಂದ ಒಂದು ನಿಮಿಷ ಕಾಲ್ನಡಿಗೆಯ ದೂರದಲ್ಲಿ ದರ್ಬಾರ ಚೌಕ. ಕಲಾತ್ಮಕವಾದ ಅರಮನೆಗಳು ಹಾಗೂ ಮಂದಿರಗಳಿಂದ ಕೂಡಿದ ಚೌಕ. ಕಲಾರಾಧನೆಯು ನೇಪಾಳದ ಜನರ ರಕ್ತದಲ್ಲೇ ಹರಿಯುತ್ತಿರುವುದೇನೋ! ಅನತಿ ದೂರದಲ್ಲೇ ದತ್ತಾತ್ರೇಯ ಚೌಕ. ಇಲ್ಲಿ ಭೀಮಸೇನನಿಗೂ ಒಂದು ಮಂದಿರವಿರುವುದನ್ನು ಕಂಡು ವಿಸ್ಮಯವಾಯಿತು. ಇನ್ನೂ ಮುಂದೆ ಹೋದರೆ ಮಯೂರ್ ಜಲ್, ಅಮೋಘವಾದ ಕೆತ್ತನೆಯ ಕೆಲಸದಿಂದ ಕೂಡಿದ ನವಿಲಿನ ಕಿಟಕಿ. ಕಿಟಕಿಯ ಹೊರಗಡೆ ಕಪ್ಪನೆಯ ಸುಂದರ ನವಿಲು, ಅದು ಗರಿಗೆದರಿ ಕಿಟಕಿಯಾಗಿದೆ. ಇಲ್ಲಿಂದ ಮುಂದೆ ಮಡಕೆಯ ಚೌಕಕ್ಕೆ ಹೋದೆವು. ಉದ್ದ, ಗಿಡ್ಡ, ಅಗಲ, ಸಣ್ಣ, ಕಪ್ಪು, ಬಿಳುಪು—ಹೀಗೆ ವಿವಿಧ ಆಕಾರಗಳ ಮತ್ತು ವಿವಿಧ ಬಣ್ಣಗಳಿಂದ ಕೂಡಿದ ಮಡಕೆಗಳನ್ನು ಸಾಲಾಗಿ ಇಟ್ಟಿರುವ ಆ ಕಲಾ ನೈಪುಣ್ಯತೆಗೆ ಬೆರಗಾದೆ. ಹೀಗೆ ಕಣ್ಮನ ಸೆಳೆಯುವ ಚಂಗು ನಾರಾಯಣ ಮಂದಿರ, ಹಾವಿನ ಕೊಳ, ೨೦೦೦ ವರ್ಷಗಳ ಪುರಾತನ ವಸ್ತು ಸಂಗ್ರಹಾಲಯ, ೫೫ ಸಣ್ಣ ಸಣ್ಣ ಒಂದೇ ಮಾದರಿಯ ಕಿಟಕಿಗಳುಳ್ಳ ದರ್ಬಾರ ಮುಂತಾದವುಗಳನ್ನೆಲ್ಲಾ ನೋಡುತ್ತಾ ಹಿಂದಿರುಗಿದೆವು. ಒಟ್ಟಿನಲ್ಲಿ ಇದನ್ನು ನೇಪಾಳದ "ಸಾಂಸ್ಕೃತಿಕ ನಗರ"ವೆಂದು ಕರೆಯಬಹುದು. ಭಕ್ತಪುರವನ್ನು ನೋಡದ ನೇಪಾಳ ಯಾತ್ರೆಯು ಪೂರ್ಣವಲ್ಲ. ಒಂದೊಂದು ಸ್ಥಳದ ಹಿಂದೆಯೂ ಇರುವ ಐತಿಹಾಸಿಕ ಕಥೆ ಬಹು ಕುತೂಹಲಕಾರಿ. ಸಮಯಾಭಾವದಿಂದ ಮನಸ್ಸಿಲ್ಲದ ಮನಸ್ಸಿನಿಂದ ಹಿಂದಿರುಗಿದೆವು.

ಇಲ್ಲಿನ ಹವಾ ವರ್ತಮಾನ ಕೇಳಿ ಖೇದವೂ ಆಶ್ಚರ್ಯವೂ ಆಯಿತು. ಕೆಲವೊಮ್ಮೆ ಹಗಲು ಬಿಸಿಲಿನ ಝಳದಿಂದ ಸೂರ್ಯಾಘಾತವಾದರೆ ಸಂಜೆಯ ಹೊತ್ತಿಗೆ ಅತ್ಯಧಿಕ ಶೈತ್ಯದಿಂದ ಸೆಡತ ಉಂಟಾಗುವುದಂತೆ! ಒಂದೇ ದಿನದಲ್ಲಿ ಈ ರೀತಿಯ ಬದಲಾವಣೆ ವಾತಾವರಣದಲ್ಲಿ!! ಅಂತೂ ಊರಿಗೆ ಮರಳುವ ದಿನ ಬಂದಿತು. ಪ್ರಾಕೃತಿಕ ಐಶ್ವರ್ಯದಿಂದ ಕೂಡಿದ ನಗರ, ಗಾಂಭೀರ್ಯವೇ ಮೈವೆತ್ತಂತೆ ಠೀವಿಯಿಂದ ಸಾಲುಸಾಲಾಗಿ ನಿಂತಿರುವ ಭವ್ಯವಾದ ಪರ್ವತ ರಾಶಿಗಳು, ಶುಭ್ರ, ಸ್ವಚ್ಛ ಪಾರದರ್ಶಕ ಜಲ, ಪಚ್ಚೆ ಹಸಿರು ಸೀರೆಯನ್ನುಟ್ಟು ನಿಂತ ವನಶ್ರೀ, ಶ್ವೇತಶುಭ್ರ ಮೋಡಗಳು, ಆಹ್ಲಾದಕರವಾದ ಗಾಳಿ, ಎಲ್ಲವನ್ನು ಬಿಟ್ಟು ಕತ್ತಲೆಯ ಮಡಲಿಗೆ ಒಯ್ದಿತ್ತು ನಮ್ಮನ್ನು ಹೊತ್ತ ವಾಹನ. ಆತಿಥೇಯರಿಗೆ ಕೃತಜ್ಞತೆಯನ್ನರ್ಪಿಸುತ್ತಾ ಭಾರವಾದ ಮನಸ್ಸಿನಿಂದ ಹಿಂದಿರುಗಿದೆವು.

"ಹಿಮಾಚ್ಛಾದಿತ ಸ್ವರ್ಗ" ಎಂಬ ಹೆಸರೇ ರೋಮಾಂಚನವನ್ನುಂಟುಮಾಡುವುದು. ಆದರೆ ಅದೆಂತಹ ಅನಿರೀಕ್ಷಿತ ಬದಲಾವಣೆ ವಾತಾವರಣದಲ್ಲಿ! ಸ್ಮೃತಿಶಕ್ತಿಯ ಹಾಗೂ ಶಬ್ದಗಳ ಪರಿಮಿತಿಯಿಂದ ಈ ಅದ್ವಿತೀಯ ಸೌಂದರ್ಯದ ವರ್ಣನೆಯು ಅಪೂರ್ಣವಾಯಿತಲ್ಲಾ ಎಂಬ ದುಗುಡ ಮನಸ್ಸಿನಿಂದ ಮುಗಿಸುತ್ತಿರುವೆ. ❑